# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/110/2015-16 ದಿನಾಂಕ:14.07.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ತಾರಿಹಳ್ಳಿ ನಾಗಮ್ಮ ಗಂಡ ಲೇಟ್ ತಾರಿಹಳ್ಳಿ ಗಿರಿಯಪ್ಪ ಗ್ರಾಮ:-ವರ್ಲಹಳ್ಳಿ ತಾ:-ಹೆಚ್.ಬಿ.ಹಳ್ಳಿ | ಎಲ್.ಜಿ.ಭರಮಮ್ಮ ಗಂಡ ಅಂಜಿನಪ್ಪ ಗ್ರಾಮ:-ವರ್ಲಹಳ್ಳಿ ತಾ:-ಹೆಚ್.ಬಿ.ಹಳ್ಳಿ |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ವರ್ಲಹಳ್ಳಿ | 317 | 8-05 | ಖುಷ್ಕಿ |
| 2. | ಹಗರಿಬೊಮ್ಮನಹಳ್ಳಿ | ವರ್ಲಹಳ್ಳಿ | 581ಡಿ/2 | 5-50 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವರ್ಲಹಳ್ಳಿ ಗ್ರಾಮದ ವಿವಾದಿತ ಜಮೀನುಗಳಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವರ್ಲಹಳ್ಳಿ ಗ್ರಾಮದ ನಿವಾಸಿಯಾದ ತಾರಿಹಳ್ಳಿ ನಾಗಮ್ಮ ಗಂಡ ಲೇಟ್ ತಾರಿಹಳ್ಳಿ ಗಿರಿಯಪ್ಪ ಇವರ ಹೆಸರಿಗೆ ನೋಂದಾಯಿತ ವಿಲ್ ಪ್ರಕಾರ ಹಕ್ಕು ಬದಲಾವಣೆಯನ್ನು ಮಾಡಲು ದಿನಾಂಕ:26.02.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:09.03.2016 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:06.04.2016 ರಂದು ಎಲ್.ಜಿ.ಭರಮಮ್ಮ ಗಂಡ ಅಂಜಿನಪ್ಪ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.84/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ರವರು ಈ ಕಾರ್ಯಾಲಯಕ್ಕೆ ವರದಿಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆದಿನಾಂಕ:19.05.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:19.05.2016 ರಿಂದ 23.06.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಪ್ರಕರಣದ ಸ.ನಂ.317 ವಿಸ್ತೀರ್ಣ 8-05 ಎಕರೆ ಜಮೀನು ಪೈಕಿ 2-00 ಎಕರೆ ಜಮೀನು ಬರಬೇಕೆಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಅರ್ಜಿದಾರರು ಹೇಳುವಂತೆ; ನೋಂದಾಯಿತ ದಸ್ತಾವೇಜು ಪ್ರಕಾರ ನನ್ನ [ಅರ್ಜಿದಾರರ] ಹೆಸರಿಗೆ ಹಕ್ಕುಬದಲಾವಣೆಮಾಡಲು ಹೇಳಿಕೆಯನ್ನು ನೀಡಿರುತ್ತಾರೆ. ಹಾಗೂ ಸದರಿ ಜಮೀನುಗಳಲ್ಲಿ ಸುಮಾರು 50ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿರುತ್ತೇವೆಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಮುಂದುವರೆದು, ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಜಮೀನಿನಲ್ಲಿ ನನಗೆ ಯಾವುದೇ ಪಾಲು ಬೇಡವಾಗಿರುತ್ತದೆ. ಸದರಿ ಜಮೀನುಗಳಿಗೆ ಅರ್ಜಿದಾರರ ಹೆಸರಿಗೆ ಹೆಸರಿಗೆ ಹಕ್ಕುಬದಲಾವಣೆಮಾಡಲು ನನ್ನ ಯಾವುದೇ ಅಭ್ಯಾಂತರ ಇರುವುದಿಲ್ಲ ಹಾಗೂ ನನ್ನ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆಯುವುದಾಗಿ ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಮುಂದುವರೆದು, ತಕರಾರುದಾರರು ಮತ್ತು ವಾರಸುದಾರರು ಹಾಜರಾಗಿ ಹೇಳುವಂತೆ; ಸದರಿ ಜಮೀನು ಪಿತ್ರಾರ್ಜಿತ ಆಸ್ತಿಯಾಗಿದ್ದು, ದಿವಂಗತ ತಾರಿಹಳ್ಳಿ ಕಾಡವ್ವ ಇವರ ಹೆಸರಿನಲ್ಲಿ ಪಹಣಿ ದಾಖಲೆ ಇದ್ದು, ಇವರು 12.01.1965 ರಲ್ಲಿ ನೋಂದಾಯಿತ ವಿಲ್ ಪ್ರಕಾರ ಇವರ ಮೈದುನನ

-ಮಗನಾದ ದಿವಂಗತ ಗಿರಿಯಪ್ಪ ಇವರ ಹೆಸರಿಗೆ ವಿಲ್ ಬರೆದುಕೊಟ್ಟಿದ್ದು ಇವರು ಪೌತಿಯಾಗಿರುವುದರಿಂದ ವಿಲ್ ಹಾಗೂ ಪೌತಿ ವಾರಸು ಪ್ರಕಾರ ಇವರ ಹೆಂಡತಿಯಾದ ತಾರಿಹಳ್ಳಿ ನಾಗಮ್ಮ ಲೇಟ್ ತಾರಿಹಳ್ಳಿ ಗಿರಿಯಪ್ಪ ಇವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ನಮ್ಮ ತಂಟೆ, ತಕರಾರು ಇರುವುದಿಲ್ಲ ಎಂದು ಲಿಖಿತವಾಗಿ ಸಮ್ಮತಿಸಿ ಒಪ್ಪಿಗೆ ಪತ್ರವನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಪ್ರಕರಣದಲ್ಲಿ ನಾನು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತೇನೆ ನಂತರ, ನಾನು ಸ್ವ-ಹಿಚ್ಛೆಯಿಂದ ರಾಜಿಯಾಗಿರುವುದರಿಂದ ತಾರಿಹಳ್ಳಿ ನಾಗಮ್ಮ ಲೇಟ್ ತಾರಿಹಳ್ಳಿ ಗಿರಿಯಪ್ಪ ಇವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ನನ್ನ ಯಾವುದೇ ತಂಟೆ, ತಕರಾರು ಇರುವುದಿಲ್ಲ ಎಂದು ಸಾಕ್ಷಾದಾರರ ಸಮ್ಮುಖದಲ್ಲಿ ಲಿಖಿತವಾಗಿ ಒಪ್ಪಿಗೆ ಪತ್ರವನ್ನು ಸಲ್ಲಿಸಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರ ಮತ್ತು ತಕರಾರುದಾರರ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ಪೌತಿ ಪಟ್ಟಾದಾರರಾದ ತಾರಿಹಳ್ಳಿ ಕಾಡವ್ವ ಇವರು ತಾರಿಹಳ್ಳಿ ಗಿರಿಯಪ್ಪ ಇವರಿಗೆ ವಿಲ್ ನೋಂದಾಯಿತ ದಸ್ತಾವೇಜು ದಿನಾಂಕ:21.01.1965 ರ ಪ್ರಕಾರ ವರ್ಲಹಳ್ಳಿ ಗ್ರಾಮದ ಸ.ನಂ.317 ವಿಸ್ತೀರ್ಣ 8-05 ಎಕರೆ ಮತ್ತು ಸ.ನಂ.581ಡಿ ಪೈಕಿ ವಿಸ್ತೀರ್ಣ 5-66 ಎಕರೆ ಜಮೀನಿಗೆ ವಿಲ್ ಆಗಿರುವುದು ದಾಖಲೆಯಿಂದ ಕಂಡುಬಂದಿರುತ್ತದೆ. ಸದರಿ ತಾರಿಹಳ್ಳಿ ಗಿರಿಯಪ್ಪ ಇವರು ಮೋತಿಯಾಗಿರುತ್ತಾರೆ. ವರ್ಲಹಳ್ಳಿ ಗ್ರಾಮದ ಸ.ನಂ.581ಡಿ ವಿಸ್ತೀರ್ಣ 5-66 ಎಕರೆ ಪೈಕಿ ವಿಸ್ತೀರ್ಣ 0-16 ಸೆಂಟ್ಸ್ ಜಮೀನು ಎಂ.ಆರ್.ಸಂಖ್ಯೆ 148/2008-2009 ವಿಭಜನೆ 03/04/2009 ರಲ್ಲಿ ವಿಭಜನೆಯಿಂದ ಕಡಿಮೆಯಾಗಿರುವುದು ಗಣಕೀಕೃತ ಪಹಣಿ ಪತ್ರಿಕೆಯಿಂದ ಕಂಡುಬಂದಿರುತ್ತದೆ. ಪ್ರಕರಣದಲ್ಲಿ ವರ್ಲಹಳ್ಳಿ ಗ್ರಾಮದ ಸ.ನಂ.581ಡಿ/2 ವಿಸ್ತೀರ್ಣ 5-50 ಎಕರೆ ವಿಸ್ತೀರ್ಣಕ್ಕೂ ಮತ್ತು ವಿಲ್‌ನಲ್ಲಿ ನಮೂದಾಗಿರುವ ವಿಸ್ತೀರ್ಣಕ್ಕೂ ತಾಳೆ ಇಲ್ಲದಿರುವುದು ಕಂಡುಬಂದಿರುತ್ತದೆ. ಕಾರಣ, ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129 ರನ್ವಯ ಎಂ.ಆರ್.ನಂ.84/2015-16 ರ ಪ್ರಕಾರ, ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:14.07.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

14/7/16
[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರ್,
ನಾಡ ಕಾರ್ಯಾಲಯ, ಕೋಗಳಿ
ಕೋಗಳಿ.

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧಪ್ರತಿ ಕಡತಕ್ಕೆ.